ಕರ್ನಾಟಕ ಸರಕಾರ

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿ (ಆಡಳಿತ)
ಮೌಲ್ಯವರ್ಧಿತ ತೆರಿಗೆ ವಿಭಾಗ ಕಲಬುರಗಿ,
ದೂರವಾಣಿ/ ಫ್ಯಾಕ್ಸ್ ಸಂಖ್ಯೆ : 08472 222051

---

ಸಂಖ್ಯೆ: ವಾತೆಜಂಆ/ಆ/ಡಿ.ವಿ.ಓ/ಕ/ಸಿಬ್ಬಂದಿ-1/ ವಾಚಾ/15-16/ ದಿನಾಂಕ : 22-05-2015.

:: **ಅಧಿಸೂಚನೆ** ::

ವಿಷಯ : 2015-16 ನೇ ಸಾಲಿಗೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಈ ವಿಭಾಗದ ಸರ್ಕಾರಿ ವಾಹನಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮೂರು ವಾಹನ ಚಾಲಕರ ಸೇವೆಯನ್ನು ಖಾಸಗಿ ಸಂಸ್ಥೆಗಳಿಂದ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ : ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಬೆಂಗಳೂರು ಇವರ ಸುತ್ತೋಲೆ ಸಂ: ವಿಹೆಚ್‌ಟಿ/ಸುತ್ತೋಲೆ-2/2014-15 ದಿನಾಂಕ : 31-03-2015.

<<>>

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಕಛೇರಿಗೆ ಮೂರು ವಾಹನ ಚಾಲಕರ ಸೇವೆಯನ್ನು ಖಾಸಗಿ ಸಂಸ್ಥೆಗಳ ಮೂಖಾಂತರ ಪಡೆಯಲು ಉಲ್ಲೇಖ(1)ರ ಪ್ರಕಾರದಂತೆ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಬೆಂಗಳೂರುರವರು ಅನುಮತಿ ನೀಡಿದ್ದಾರೆ. ಪ್ರಯುಕ್ತ ಅಧಿಕೃತ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಕೆ.ಟಿ.ಪಿ.ಪಿ. ನಿಯಮಗಳನ್ವಯ ಮೂರು ಖಾಸಗಿ ವಾಹನ ಚಾಲಕರ ಸೇವೆಯನ್ನು ಪಡೆಯಲು ಕೆಲವೊಂದು ಷರತ್ತುಗಳೊಂದಿಗೆ ಅಧಿಸೂಚನೆ ಹೊರಡಿಸಲಾಗಿದೆ. ಕಾರಣ ಅಧಿಕೃತ ಸಂಸ್ಥೆಗಳಿಂದ ತಮ್ಮ ದರ ಪಟ್ಟಿಯನ್ನು ಮತ್ತು ವಾಹನ ಚಾಲಕರ ಹೆಸರುಗಳನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಸಲ್ಲಿಸಿದ ದರಪಟ್ಟಿಗಳಲ್ಲಿ ಅತಿ ಕಡಿಮೆ ದರ ಹೊಂದಿದ ಎಲ್ಲ ಅರ್ಹತೆಯನ್ನು ಹೊಂದಿ, ಷರತ್ತುಗಳನ್ನು ಪೂರೈಸುವ ಸಂಸ್ಥೆಯವರ ದರಪಟ್ಟಿಯನ್ನು ಅಂಗಿಕರಿಸಲಾಗುವುದು.

1. **ಮುಚ್ಚಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01-06-2015.**
2. **ಟೆಂಡರ್ ತೆರೆಯುವ ದಿನಾಂಕ: 02-06-2015.**
3. **ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: 04-06-2015.**
4. **ಟೆಂಡರ್ ಅವಧಿ: 01-06-2015 ರಿಂದ 31-03-2016.**

ಈ ವಿಭಾಗಕ್ಕೆ ಅವಶ್ಯಕತೆಯಿರುವ ಸ್ಥಳಗಳು ಮತ್ತು ವಾಹನಚಾಲಕರ ಸಂಖ್ಯೆ ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಊರು/ಜಿಲ್ಲೆಯ ಹೆಸರು | ವಾಹನ ಚಾಲಕರ ಸಂಖ್ಯೆ | ಕಾರ್ಯ ಸ್ವರೂಪ |
|---|---|---|---|
| 1 | ಕಲಬುರಗಿ | 02 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)ಡಿ.ವಿ.ಓ.,ಕಲಬುರಗಿರವರ ಕಛೇರಿ |
| 2 | ರಾಯಚೂರು | 01 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಆಡಿಟ್) ರಾಯಚೂರ ರವರ ಕಛೇರಿ |

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ), ಡಿ.ವಿ.ಓ., ಕಲಬುರಗಿ.

**ಷರತ್ತುಗಳು:-**

1) ಸಂಸ್ಥೆಯವರ ನೋಂದಣಿಯನ್ನು ಇಲ್ಲಿಯವರೆಗೆ ನವೀಕರಣ ಹೊಂದಿರಬೇಕು.
2) ಕಾರ್ಮಿಕ ಇಲಾಖೆಯ ನಿಯಮದಂತೆ ಸೇವಾ ತೆರಿಗೆ, ಕಾರ್ಮಿಕ ವಿಮಾ, ಭವಿಷ್ಯ ನಿಧಿಯನ್ನು ಕಡಿತಗೊಳಿಸುವುದು ದರಪಟ್ಟಿಯಲ್ಲಿ ಸೇರಿರಬೇಕು.
3) ತಾವು ಸಲ್ಲಿಸಿದ ದರಪಟ್ಟಿಯು ಕಾರ್ಮಿಕ ಇಲಾಖೆಯ ದರಗಳಿಗಿಂತ ಮೀರಿರಬಾರದು.
4) ವಾಹನ ಚಾಲಕರು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ವಾಹನ ಚಾಲನ ಪ್ರಮಾಣ ಪತ್ರ ಹೊಂದಿರಬೇಕು.
5) ವಾಹನ ಚಾಲಕರ ನಡತೆಯು ಸರಿಕಂಡುಬರದಿದ್ದಲ್ಲಿ ಅವರ ಸೇವೆಯನ್ನು ಕಡಿತಗೊಳಿಸಲಾಗುವುದು.
6) ವಾಹನ ಚಾಲನೆಯಲ್ಲಿ ಯಾವುದೇ ಅವಘಡ ಸಂಭವಿಸಿದರೇ ಅದಕ್ಕೆ ತಾವೇ ಜವಾಬ್ದಾರರು ಎಂದು ಮುಚ್ಚಳಿಕೆ ಬರೆದುಕೊಡಬೇಕು.
7) ಸೇವೆ ಸಲ್ಲಿಸುವ ವಾಹನ ಚಾಲಕರ ವಯಸ್ಸು 29 ರಿಂದ 40 ಮೀರಿರಬಾರದು.
8) ಈಗಾಗಲೇ ಈ ಇಲಾಖೆಯಲ್ಲಿ/ವಿಭಾಗದಲ್ಲಿ ನಿಷ್ಕಳಂಕಿತ ಸೇವೆ ಒದಗಿಸಿದ್ದವರಿಗೆ ಆದ್ಯತೆ ನೀಡಲಾಗುವುದು.
9) ಇನ್ನೂ ಹೆಚ್ಚಿನ ವಾಹನ ಚಾಲಕರು ಅಗತ್ಯಬಿದ್ದಲ್ಲಿ ಸಂಸ್ಥೆಯಿಂದ ಒದಗಿಸಲು ಸಿದ್ಧರಿರಬೇಕು.
10) ಟೆಂಡರದಾರರು ಕಾರ್ಯನಿರ್ವಹಿಸಲು ಇಚ್ಛಿಸುವ ಜಿಲ್ಲೆವಾರು ತಮ್ಮ ಅಭಿಪ್ರಾಯವನ್ನು ಲಕೋಟ ಮೇಲೆ ಸ್ಪಷ್ಟವಾಗಿ ನಮೂದಿಸರಬೇಕು.
11) ಯಾವುದೆ ಕಾರಣ ನೀಡದೇ ಒಪ್ಪುವ/ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆಯುವ ಪ್ರಾಧಿಕಾರಾದ ಜಂಟಿ ಆಯುಕ್ತರಿಗೆ ಇರುತ್ತದೆ.

22/5/15

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ವಿ.ಓ, ಕಲಬುರಗಿ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ), ಡಿ.ವಿ.ಓ., ಕಲಬುರಗಿ.